ಕೊಟ್ಟಿದ್ದಾಗಿ. ಇವರುಗಳು ಕಳ್ಳತನ ಮಾಡಿದ್ದು ಇವರುಗಳ ಮೇಲೆ ವಿಚಾರಣೆ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ ಯಾವಾಗ ಪರಿಶೀಲನೆ ಮಾಡುತ್ತೀರಿ? ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ? ಎಂದುದನ್ನು ಹೇಳಬೇಕು. ಯಾರಾದರೂ ಬೇರೆಯವರು ಕಳ್ಳತನ ಮಾಡಿದರೆ ಪೋಲೀಸ್‌ನವರು ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಕೇಸ್‌ನ್ನು ಹಾಕುತ್ತಾರೆ. ಆದರೆ ಇವರುಗಳ ಮೇಲೆ ಯಾವ ವಿಚಾರಣೆಯೆನ್ನು ಮಾಡದೆ ವಾರ್ನಿಂಗ್ ಮಾಡಿ ರಿಕವರಿ ಮಾಡಿದರೆ ಸಾಕೆ? ಮಾನ್ಯ ಮಂತ್ರಿಗಳು ಹೇಳುತ್ತಾರೆ ಸಂಬಂಧಪಟ್ಟವರಿಂದ ಹಣವನ್ನು ವಸೂಲು ಮಾಡಿ ಸರ್ಕಾರದಲ್ಲಿ ಜಮಾ ಮಾಡಿಸಲಾಗಿದೆ ಮತ್ತು ಡಿಪಾರ್ಟ್‌ಮೆಂಟಿಲ್ ಎನ್‌ಕ್ವಯರಿ ಮಾಡಿಸಿ ಕ್ಷೇಮಿಸಲಾಗಿದೆ ಎಂದು ಹೇಳುವುದು ಸರಿಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೇರವಾದ ಪ್ರಸಂಗಗಳಲ್ಲಿ ಎನ್‌ಕ್ವಯರಿ ಮಾಡಲಿಕ್ಕೆ ಆಜ್ಞೆಯನ್ನು ಹೊರಡಿಸಿದ್ದೇವೆ. ಪೆಟ್ರೋಲ್ ಖರೀದಿಸುವುದರಲ್ಲಿ ಮತ್ತು ಲಾಗ್‌ಬುಕ್ ಬರೆಯುವುದರಲ್ಲಿ ಅಲ್ಪಸ್ವಲ್ಪ ದೂರು ಬಂದು ಸಂಬಂಧಿಸಿದವರಿಗೆ ವಾರ್ನಿಂಗ್ ಮಾಡಲಾಗಿದೆ. ಲಾಗ್‌ಬುಕ್‌ನಲ್ಲಿ ಬರೆಯದೆ ವಾಹನ ನಡೆಸಿರುವ ಬಗ್ಗೆ ಅನುಮಾನ ಬಂದಕಡೆ ಕೆಲವು ಸಂದರ್ಭಗಳಲ್ಲಿ ಸಸ್‌ಪೆಂಡ್ ಮಾಡಿ ಎನ್‌ಕ್ವಯರಿಯನ್ನು ಮಾಡಿಸುತ್ತೇವೆ.

ಶ್ರೀ ಆರ್, ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಕೆ.ಜಿ.ಎಫ್. ನಲ್ಲಿ ೩೩.೧೧೫–೮೨ ರೂ. ದುರುಪಯೋಗವಾಗಿರುವುದು ಏನು ಸಣ್ಣ ಪೊತ್ತವೇ ? ನಾನು ಕೇಳುತ್ತಿರುವುದೇನೆಂದರೆ ಕಳ್ಳತನ ಮಾಡಿಸಿಕ್ಕಿಕೊಂಡಿರುವವರ ಬಗ್ಗೆ ನಿರ್ಲಕ್ಷ್ಯ ಮನೋಭಾವದಿಂದ ನೋಡುತ್ತೇವೆ, ಸರಿ ಮಾಡುತ್ತೇವೆಂದು ಹೇಳಿದರೆ ಏನು ಪ್ರಯೋಜನ ? ಪೋಲೀಸ್‌ನವರೇ ಕಳ್ಳತನ ಮಾಡಿದರೆ ಏನು ಮೊರೇಲ್ ಇರುತ್ತದೆನ್ನುವುದನ್ನು ಯೋಚನೆ ಮಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ ವಿಷಯ ಅರ್ಥ ಮಾಡಿಕೊಂಡಿರುತ್ತೇನೆ. ಇದರಲ್ಲಿ ಪೋಲೀಸ್‌ನವರು ಒಬ್ಬರೇ ಅಲ್ಲ. ಬೇರೆಯವರೂ ಇರುತ್ತಾರೆ. ಆದ್ದರಿಂದ ಜಾಯಿಂಟ್ ಎನ್‌ಕ್ವಯರಿ ಮಾಡಲು ಆರ್ಡರ್ ಮಾಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಹಾಗಲ್ಲ ತಾವು ಹೇಳಿರುವುದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಟೆಕ್ನಿಕಲಿ ಮಿಸ್ಟೇಕ್ ಆಗಬಾರದೆಂದು ಯಾವ ಯಾವ ಇಲಾಖೆಯಲ್ಲಿ ಯಾರು ಯಾರು ಇದ್ದಾರೆಂಬುದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸುತ್ತೇನೆ.

ಕಾವೇರಿ ಬಲದಂಡೆ ವರುಣ ನಾಲಾ ಶಂಕಸ್ಥಾಪನೆ.

೩೩೦. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ ಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಬಲದಂಡೆ ವರುಣ ನಾಲಾಕ್ಕಾಗಿ ಶಂಕು ಸ್ಥಾಪನೆಯಾದದ್ದು ಯಾವಾಗ, ಹಾಗೂ ಆಗಿನ ಅಂದಾಜು ವೆಚ್ಚವೆಷ್ಟು ?

ಆ) ಈ ನಾಲಾ ನಿರ್ಮಾಣದಿಂದ ಎಲ್ಲೆಲ್ಲಿ, ಎಷ್ಟೆಷ್ಟು ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕುವುದು ?

ಇ) ಈ ನಾಲಾ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ?

ಈ) ನಾಲಾ ನಿರ್ಮಾಣ ಪೂರ್ಣಗೊಳಿಸುವ ಕೆಲಸ ವಿಳಂಬಗೊಳ್ಳಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಶಂಕುಸ್ಥಾಪನೆ ೧೫–೪–೧೯೭೯ ಅಂದಾಜು ವೆಚ್ಚ ೧೮೫೦ ಲಕ್ಷ ರೂ.ಗಳು.

ಆ) ೩೨,೮೭೫ ಹೆಕ್ಟೇರು (೮೦,೦೦೦ ಎಕರೆ) ನೀರಾವರಿ ಆಗಲಿದೆ.

ತಾಲ್ಲೂಕಂವಾರು ವಿವರಗಳು ಈ ಕೆಳಗಿನಂತಿವೆ.

ಮಂಡ್ಯ ಜಿಲ್ಲೆ	
ಶ್ರೀ ರಂಗಪಟ್ಟಣ ತಾಲ್ಲೂಕು	೩೦೫೬ ಹೆಕ್ಟೇರು
ಮೈಸೂರು ಜಿಲ್ಲೆ	
ಮೈಸೂರು ತಾಲ್ಲೂಕು	೧೮,೨೩೫ ಹೆಕ್ಟೇರು
ಹೆಚ್. ಡಿ. ಕೋಟೆ ತಾಲ್ಲೂಕು	೧,೮೮೮ ಹೆಕ್ಟೇರು
ನಂಜನಗೂಡು ತಾಲ್ಲೂಕು	೬,೧೯೧ ಹೆಕ್ಟೇರು
ಟಿ. ನರಸೀಪುರ ತಾಲ್ಲೂಕು	೩,೦೮೫ ಹೆಕ್ಟೇರು

ಇ) ಕಾಲುವೆಯ ೫೦ ಕಿ ಮೀಗಳವರೆಗಿನ ಕೆಲಸಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ.

ಈ) ಸಂಪನ್ಮೂಲಗಳ ಇತಿಮಿತಿಯೇ ಮುಖ್ಯ ಕಾರಣ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಇದು ಶಂಕುಸ್ಥಾಪನೆಯಾಗಿ ಹತ್ತು ವರ್ಷ ಆಯಿತು. ಆದರೆ ನಾಲಾ ಕೆಲಸ ಯಾವಾಗ ಪ್ರಾರಂಭವಾಯಿತು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ಆದರ ಜೊತೆಗೆ ನಾಲಾ ಕೆಲಸ ಎಂದು ನಿಂತಿತು ? ಕೆಲಸ ನಿಲ್ಲುವುದಕ್ಕೆ ಕಾರಣ ಹೆಣಕಾಸಿನದು ಎಂದು ಹೇಳುತಾ ರೆ. ಈಗ ಆಲ್ಲಿರತಕ್ಕ ಸಬ್-ಡಿವಿಷನ್ ಏನಾದರೂ ಕೆಲಸ ಮಾಡುತ್ತಿದೆಯೇ ? ಅಥವಾ ಬರೀ ರಿಜಿಸ್ಟರ್‌ನಲ್ಲಿ ಸೈನ್ ಹಾಕಿ ದುಡ್ಡು ತೆಗದು ಕೊಳ್ಳುತ್ತಿದಾ ರೆಯೆ ? ಅವರಿಗೆ ಎಷ್ಟು ಮಾತ್ರ ಕೆಲಸ ವಹಿಸಿದ್ದಾರೆ ? ಮೂರನೆಯದು, ಇಲ್ಲಿಯವರೆಗೆ ಆ ನಾಲೆಯಿಂದ ಏನಾದರೂ ನೀರು ಸರಬರಾಜು ಆಗಿದೆಯೇ ? ಆಗಿದ್ದರೆ ಎಷ್ಟು ಎಕರೆಗೆ ಅಥವಾ ಹೆಕ್ಟೇರ್‌ಗೆ ನೀರು ಕೊಟ್ಟಿದ್ದಾರೆ ದಯವಿಟ್ಟು ತಿಳಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೆ, ನೀರನ್ನು ಹೆಚ್ಚು ಕೊಟ್ಟಿಲ್ಲ. ಸುಮಾರು ಒಂದು ಸಾವಿರ, ಎರಡು ಸಾವಿರ ಎಕರೆಗೆ ಮಾತ್ರ ಕೊಟ್ಟಿದೆ. ಕೆಲಸ ಪ್ರಾರಂಭವಾಗಿ ಬೇರೆ ಬೇರೆ ಹಂತದಲ್ಲಿದೆ. ಈಗಾಗಲೇ ಕಾಲುವೆಗಳ ಕೆಲಸ ಪ್ರಾರಂಭ ಆಗಿದೆ. ಆಣೆಕಟ್ಟಿನ ಕೆಲಸವನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿತ್ತು. ಅವನು ಸರಿಯಾಗಿ ಕೆಲಸ ಮಾಡದಿದ್ದುದರಿಂದ ಅವನ ಕಂಟ್ರಾಕ್ಟನ್ನು ರದ್ದು ಮಾಡಿದ್ದೇವೆ. ಪುನಃ ಟೆಂಡರ್ ಕರೆದಿದ್ದಾರೆ. ಈ ಕೆಲಸ ಬೇಗ ಪ್ರಾರಂಭ ಮಾಡುತ್ತೇವೆ. ಈ ಕೆಲಸವನ್ನು ಕಳೆದ ಎರಡು ಮೂರು ವರ್ಷಗಳಲ್ಲಿ ಕೈಗೆತ್ತಿಕೊಂಡಿದೆ. ಹೋದ ವರ್ಷ ೩೫೫ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದೆವು. ಆದರಲ್ಲಿ ೧೯೪ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ ವರ್ಷ ೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದನ್ನೆಲ್ಲಾ ಖರ್ಚು ಮಾಡಿ ಕಾಲುವೆ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ನನಗೆ ತಿಳಿದಮಟ್ಟಿಗೆ ಕಂಟ್ರಾಕ್ಟರಿಗೆ ಬಿಲ್ ಪಾವತಿ ಆಗಿಲ್ಲ, ಅದಕ್ಕಾಗಿ ಕೆಲಸ ನಿಂತಿದೆ. ಅದು ನಿಜವೇ ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಕಾಂಟ್ರಾಕ್ಟ್ ಕಾನ್ಸಲ್ ಮಾಡಿದ್ದೇವೆ. ನೋಟೀಸ್ ಕೊಟ್ಟು ರದ್ದುಮಾಡಿ ಪುನಃ ಟೆಂಡರ್ ಕರೆದಿದ್ದೇವೆ. ಕೆಲಸ ಪ್ರಾರಂಭ ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೀರಾವರಿ ಆಣೆಕಟ್ಟುಗಳ ಸಂಖ್ಯೆ.

೪೭೨. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೀರಾವರಿ ಆಣೆಕಟ್ಟುಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ನಾದುರಸ್ತಿಯಲ್ಲಿರುವ ಆಣೆಕಟ್ಟುಗಳೆಷ್ಟು ?

ಇ) ಸಣ್ಣ ನೀರಾವರಿ ಇಲಾಖೆಯಲ್ಲಿರುವ ಆಣೆಕಟ್ಟುಗಳ ಸಂಖ್ಯೆ ಎಷ್ಟು ?